ಸಂಪುಟ 01 | ಸಂಚಿಕೆ 31 | ಶುಕ್ರವಾರ 12 ಡಿಸೆಂಬರ್ 2025 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

**1)ವಿಶ್ವ ಆರೋಗ್ಯ ರಕ್ಷಣಾ ದಿನ**

ಎಲ್ಲರಿಗೂ ಸುಲಭವಾಗಿ ಸಿಗುವ ಮತ್ತು ಕೈಗೆಟುಕುವ ಆರೋಗ್ಯ ಸೇವೆಯ ಅಗತ್ಯತೆಯ ಬಗ್ಗೆ ಜಾಗೃತಿ ಮೂಡಿಸಲು ಡಿಸೆಂಬರ್ 12 ರಂದು ಸಾರ್ವತ್ರಿಕ ಆರೋಗ್ಯ ರಕ್ಷಣೆ (ಗಊಅ) ದಿನವನ್ನು ಆಚರಿಸಲಾಗುತ್ತದೆ. , ಇದು ವಿಶ್ವ ಆರೋಗ್ಯ ರಕ್ಷಣಾ ದಿನ ಆರೋಗ್ಯ ವೆಚ್ಚಗಳಿಂದಾಗಿ ಆರ್ಥಿಕ ಸಂಕಷ್ಟದಿಂದ ಜನರನ್ನು ರಕ್ಷಿಸುವ ಗುಣಮಟ್ಟದ, ಕೈಗೆಟುಕುವ ಮತ್ತು ಸುಲಭವಾಗಿ ಸಿಗುವ ಆರೋಗ್ಯ ವ್ಯವಸ್ಥೆಗಳಿಗಾಗಿ ಪ್ರತಿಪಾದಿಸಲು ಇದನ್ನು ಆಚರಿಸಲಾಗುತ್ತದೆ. ಆರೋಗ್ಯಕರ ಜೀವನವನ್ನು ಖಚಿತಪಡಿಸಿಕೊಳ್ಳುವುದು ಮತ್ತು ಎಲ್ಲರಿಗೂ ಯೋಗಕ್ಷೇಮವನ್ನು ಉತ್ತೇಜಿಸುವಂತಹ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಗಊಅ ಯ ಪಾತ್ರವನ್ನು ಈ ದಿನ ಎತ್ತಿ ತೋರಿಸುತ್ತದೆ. 2012 ರಲ್ಲಿ ಗಿ. ಜನರಲ್ ಅಸೆಂಬ್ಲಿಯು ಗಊಅ ಗೆ ಸರ್ವಾನುಮತದ ಬೆಂಬಲವನ್ನು ಆದ್ಯತೆಯಾಗಿ ನೀಡಿದ ನಂತರ, 2017 ರಲ್ಲಿ ವಿಶ್ವಸಂಸ್ಥೆಯು ಡಿಸೆಂಬರ್ 12 ಅನ್ನು ಅಂತರರಾಷ್ಟ್ರೀಯ ಸಾರ್ವತ್ರಿಕ ಆರೋಗ್ಯ ರಕ್ಷಣೆ ದಿನವೆಂದು ಘೋಷಿಸಿತು.

## ಸುಭಾಷಿತ

ನಂಬಿಕೆಯೇ ಯಶಸ್ಸಿನ ಮೂಲಾಧಾರ.
ನಂಬಿಕೆಯಿಲ್ಲದಿದ್ದರೆ ಯಾವುದೇ ಕಾರ್ಯ
ಸಿದ್ಧಿಸುವುದಿಲ್ಲ. ಸುಖದ ಅನುಭವಕ್ಕೆ ನಂಬಿಕೆ ಮುಖ್ಯ.

ಅರವಿಂದ

# ಕಳಪೆ ಔಷಧ ಪೂರೈಕೆ ಸಹಿಸುವುದಿಲ್ಲ : ಸಚಿವ ಗುಂಡೂರಾವ್ ಎಚ್ಚರಿಕೆ



**ಬೆಳಗಾವಿ: ಅವಧಿ ಮೀರಿದ ಮತ್ತು ಕಳಪೆ ಔಷಧಿಗಳ ಪೂರೈಕೆಯನ್ನು ಸರ್ಕಾರ ಯಾವುದೇ ಕಾರಣ-ಕ್ಕೂ ಸಹಿಸುವುದಿಲ್ಲ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಜರುಗಿಸಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಎಚ್ಚರಿಕೆ ನೀಡಿದ್ದಾರೆ.**

ವಿಧಾನಸಭೆಯ ಪ್ರಶ್ನೋತ್ತರದ ವೇಳೆಯಲ್ಲಿ ಮಂಗಳೂರಿನ ನಗರ ಶಾಸಕ ವೇದ ವ್ಯಾಸ ಕಾಮತ್, ಮಂಗಳೂರಿನ ಆಯುಷ್ ಸಂಯುಕ್ತ ಆಸ್ಪತ್ರೆಗೆ ಪೀಠೋಪಕರಣಗಳ ಖರೀದಿಗೆ ಸಿಎಸ್‌ಆರ್ ಅಡಿ ಒದಗಿಸಲಾಗಿದ್ದ 38.50 ಲಕ್ಷ ರೂಪಾಯಿಗಳ ಅನುದಾನವನ್ನು ನಿಯಮಬಾಹಿರವಾಗಿ ಬಳಕೆ ಮಾಡಲಾಗಿದೆ. ಆರೋಗ್ಯ ಸಮಿತಿಯ ಪೂರ್ವಾನುನುಮತಿ ಪಡೆದಿಲ್ಲ. ಇದು ಸರ್ಕಾರದ ಗಮನದಲ್ಲಿದೆ, ಹೀಗಿದ್ದರೂ ಅಧಿಕಾರಿಗಳ ಮೇಲೆ ಏಕೆ ಕ್ರಮ ಕೈಗೊಂಡಿಲ್ಲ, ಪ್ರಕರಣವನ್ನು ಸಚಿವರು ಮತ್ತು ಅದಕ್ಕೆ ಅಧಿಕಾ-ರಿಗಳ ಗಮನಕ್ಕೆ ತಂದಿದ್ದೇನೆ, ತನಿಖೆಯಲ್ಲಿದೆ ಎಂದು ನುಣುಚಿಕೊಳ್ಳುತ್ತಿದ್ದಾರೆ ಎಂದು ಟೀಕಿಸಿದರು.

ಅವಧಿ ಮೀರಿದ ಮದ್ದನ್ನು ರೋಗಿಗಳಿಗೆ ನೀಡುತ್ತಿರುವ ಬಗ್ಗೆ ವಿಡಿಯೋ ಸಾಕ್ಷ್ಯ ಇದೆ. ಚಿಕ್ಕಮಗಳೂರು, ಹಾಸನ ಜಿಲ್ಲೆಗಳಿಂದಲೂ ಅವಧಿ ಮೀರಿದ ಔಷಧಿಗಳನ್ನು ಮಂಗಳೂರಿಗೆ ತಂದು ರೋಗಿಗಳಿಗೆ ನೀಡುತ್ತಿರುವುದಾಗಿ ಆರೋಪಿಸಿದರು. ಟೆಂಡರ್ ಪ್ರಕ್ರಿಯೆಗಳಲ್ಲಿ ಔಷಧಿ ಖರೀದಿಸದೆ ಸರ್ಕಾರ ಪೂರೈಸುವ ಔಷಧಿಗಳ ಜೊತೆಗೆ ಅವಧಿ ಮೀರಿದ ಔಷಧಿಗಳನ್ನು ಇರಿಸಿ ಭ್ರಷ್ಟಾಚಾರ ಮಾಡಲಾಗುತ್ತಿದೆ. ಈ ಬಗ್ಗೆ ಲೋಕಾಯುಕ್ತ ತನಿಖೆಯಾಗುತ್ತಿದೆ, ದಾಳಿಗಳು ಕೂಡ ನಡೆದಿವೆ. ಸರ್ಕಾರ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ವಾಗ್ದಾಳಿ ನಡೆಸಿದರು.

ಉತ್ತರ ನೀಡಿದ ಸಚಿವ ದಿನೇಶ್ ಗುಂಡೂರಾವ್, ಈ ಪ್ರಕರಣದಲ್ಲಿ ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ. ಆರೋಗ್ಯ ಇಲಾಖೆ ಆಯುಕ್ತರು ದೂರು ಸ್ವೀಕರಿಸುತ್ತಿದ್ದಂತೆ ತನಿಖೆ ನಡೆಸಲಾಗಿದೆ, ಇಲಾಖಾ ವಿಚಾರಣೆ ಪ್ರಗತಿಯಲ್ಲಿದೆ, ಆರೋಪಿತ-ರಿಗೆ ಶೋಕಾಸ್ ನೋಟೀಸ್ ನೀಡಲಾಗಿದೆ ಎಂದರು. ಸಿ ಎಸ್ ಆರ್ ನಿಧಿ ದುರುಪಯೋಗವಾಗಿಲ್ಲ ಆದ-'ರೆ ನಿಯಮಗಳ ಪಾಲನೆಯಲ್ಲಿ ಲೋಪಗಳಿರುವ ಆರೋಪಗಳಿವೆ. ತನಿಖೆಯಲ್ಲಿ ಇದು ಸಾಬೀತಾದರೆ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಹೇಳಿದರು. ಅವಧಿ ಮೀರಿದ ಔಷಧಿ ಮಂಗಳೂ-ರಿನ ಆಸ್ಪತ್ರೆಗೆ ಸರಬರಾಜಾಗಿಲ್ಲ ಎಂದು ಪ್ರಾಥಮಿಕ ವಿಚಾರಣೆಯಲ್ಲಿ ಕಂಡುಬಂದಿದೆ. ಆದರೂ ವಿಚಾರಣೆ ನಡೆಸಲಾಗುವುದು. ಅವಧಿ ಮುಗಿಯಲು ಇನ್ನು ಐದಾರು ತಿಂಗಳು ಸಮಯ ಇರುವಂತಹ ಔಷಧಿಗಳನ್ನು ನೀಡಲಾಗಿದೆ. ಅವುಗಳನ್ನು ಆಯುಷ್ ಇಲಾಖೆಯಿಂದ ಆಂತ-ರಿಕವಾಗಿಯೇ ಸರಬರಾಜು ಮಾಡಲಾಗಿದೆ. ಹೊರಗಿನಿಂದ ತರಿಸಿಕೊಂಡಿಲ್ಲ ಎಂದರು.

ಇದನ್ನು ಒಪ್ಪದ ಶಾಸಕ ವೇದವ್ಯಾಸ ಕಾಮತ್, ಅವಧಿ ಮೀರಿದ ಔಷಧಿ ನೀಡಿರುವುದಕ್ಕೆ ಸ್ಪಷ್ಟ ಸಾಕ್ಷಿ ಇದೆ. ಸಚಿವರು ಯಾವುದೇ ಲೋಪವಾಗಿಲ್ಲ ಎನ್ನುತ್ತಿರುವುದು ಸರಿಯಲ್ಲ ಎಂದಾಗ, ಲೋಪಗಳಾಗಿದ್ದರೆ ಕಠಿಣ ಕ್ರಮ ಕೈಗೊಳ್ಳುವ ಭರವಸೆಯನ್ನು ಸಚಿವರು ನೀಡಿದರು. ಬಸವನಗುಡಿ ಶಾಸಕ ರವಿ ಸುಬ್ರಹ್ಮಣ್ಯ, ಆಯುಷ್ ಔಷಧಿ ಖರೀದಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಪ್ರತಿ ಮೂರು ತಿಂಗಳಿಗೊಮ್ಮೆ ಹಣ ಬಿಡುಗಡೆಯಾಗುತ್ತಿದೆ. ವರ್ಷದ ಕೊನೆಯವರೆಗೂ ಅದನ್ನು ಬಳಕೆ ಮಾಡದೆ ತರಾತುರಿಯಲ್ಲಿ ವರ್ಷದ ಕೊನೆಯಲ್ಲಿ ಔಷಧಿ ಖರೀದಿಸುವ ಪ್ರಯತ್ನಗಳಾಗುತ್ತವೆ. ಇದು ವ್ಯವಸ್ಥಿತ ಷಡ್ಯಂತ್ರ ಎಂದು ದೂರಿದರು. ಆಯುಷ್ ಇಲಾಖೆಯಲ್ಲಿ ಎಂಟರಿಂದ ಒಂಬತ್ತು ವರ್ಷ ಒಂದೇ ಸ್ಥಳದಲ್ಲಿ ವೈದ್ಯರು ಕೆಲಸ ಮಾಡುತ್ತಿರುವುದು ಕಂಡು ಬಂದಿದೆ ಎಂದು ವಿವರಿಸಿದರು.

## ಬಳ್ಳಾರಿ ಹಾಕಿ ತಂಡಕ್ಕೆ ಜಯ – ಬಳ್ಳಾರಿ

❑ ನೈಜ್ಯ ದೆಸೆ ನ್ಯೂಸ್

**ಬೆಂಗಳೂರು: ಸಾಂಘಿಕ ಆಟವಾಡಿದ ಹಾಕಿ ಬಳ್ಳಾರಿ ತಂಡವು ನಾಮಧಾರಿ ಕಪ್ ಟೂರ್ನಿಯ ಪಂದ್ಯದಲ್ಲಿ ಬುಧವಾರ 11–2ರಿಂದ ಸಾಯ್ ಎಸ್‌ಟಿಸಿ ಎ ತಂಡವನ್ನು ನಿರಾಯಾಸವಾಗಿ ಸೋಲಿಸಿತು.**



ಬಳ್ಳಾರಿ ತಂಡದ ರಘುನಾಥ್ ವಿ.ಆರ್. (11ನೇ, 19ನೇ, 44ನೇ ಹಾಗೂ 53ನೇ ನಿ.) ನಾಲ್ಕು ಗೋಲು ಹೊಡೆದು ಮಿಂಚಿದರೆ, ಎಸ್.ವಿ. ಸುನಿಲ್ (4ನೇ ಹಾಗೂ 56ನೇ ನಿ.) ಮತ್ತು ಹಂಪಯ್ಯ (12ನೇ ಹಾಗೂ 34ನೇ ನಿ.) ತಲಾ ಎರಡು ಗೋಲು ಗಳಿಸಿದರು. ಪ್ರಣಮ್ ಗೌಡ (8ನೇ ನಿ.), ನಾಗಾರ್ಜುನ್ ರೆಡ್ಡಿ (26ನೇ ನಿ.) ಹಾಗೂ ಎಸ್.ಕೆ.ಉತ್ತಪ್ಪ (58ನೇ ನಿ.) ತಲಾ ಒಂದು ಗೋಲು ಹೊಡೆದರು. ಸಾಯ್ ತಂಡದ ನಯೀಮುದ್ದೀನ್ (27ನೇ ಹಾಗೂ 47ನೇ ನಿ.) ಎರಡು ಗೋಲು ಹೊಡೆದರು. ಇನ್ನೊಂದು ಪಂದ್ಯದಲ್ಲಿ ನೈಋತ್ಯ ರೈಲ್ವೆ ಹುಬ್ಬಳ್ಳಿ ತಂಡವು 5–3ರಿಂದ ಡಿವೈಇಎಸ್ ಬಿ ತಂಡದ ವಿರುದ್ಧ ರೋಚಕ ಗೆಲುವು ಸಾಧಿಸಿತು.

## ಸಿಂಧನೂರು ಪೊಲೀಸ್ ಇಲಾಖೆಯಿಂದ ಶಾಲಾ ಕಾಲೇಜಿಗೆ ಗೈರಾಗಿ ಹೊರಗಡೆ ತಿರುಗಾಡುವ ವಿದ್ಯಾರ್ಥಿಗಳಿಗೆ ಎಚ್ಚರಿಕೆ






❑ ನೈಜ್ಯ ದೆಸೆ ನ್ಯೂಸ್

**ಸಿಂಧನೂರು: ಪೊಲೀಸ್ ಇಲಾಖೆಯಿಂದ ರಚಿಸಿರುವ ರೋಡ್ ರೋಮಿಯೋ ಪಡೆಯು ಸಿಂಧನೂರು ನಗರದಲ್ಲಿ ಸಂಚಾರ ನಡೆಸಿ ಶಾಲಾ–ಕಾಲೇಜುಗಳಿಗೆ ಗೈರಾಗಿ ಬಸ್ ನಿಲ್ದಾಣ ದೇವಸ್ಥಾನ ಹೋಟೆಲ್ ಸೇರಿದಂತೆ ಮತ್ತಿತರ ಕಡೆಗಳಲ್ಲಿ ತಿರುಗಾಡುತ್ತಿದ್ದ ವಿದ್ಯಾರ್ಥಿಗಳನ್ನು ಹಿಡಿದು ಪುನಃ ತರಗತಿಗಳಿಗೆ ಕಳುಹಿಸುವ ಹೊಸ ಪ್ರಯೋಗವನ್ನು ಬುಧವಾರ ನಡೆಸಿದರು.**

ಪೊಲೀಸ್ ಇಲಾಖೆಯಿಂದ ರಚಿಸಲಾಗಿರುವ ಈ ತಂಡವು ಪ್ರತಿನಿತ್ಯ ಶಾಲಾ–ಕಾಲೇಜುಗಳಿಗೆ ಚಕ್ಕರ್ ಹಾಕಿ ನಗರದ ಪ್ರವಾಸಿ ಮಂದಿರ ಕ್ರೀಡಾಂಗಣ ಬಸ್ ನಿಲ್ದಾಣ ಮತ್ತು ಹೊರವಲಯಗಳಲ್ಲಿ ಸುಖ ಸುಮ್ಮನೆ ಕುಳಿತು ಹರಟೆ ಹೊಡೆಯುತ್ತಾ ಸಮಯ ವ್ಯರ್ಥ ಮಾಡುತ್ತಿದ್ದ ವಿದ್ಯಾರ್ಥಿಗಳನ್ನು ಬೆನ್ನತ್ತಿ ಹೇಳಿದ್ದು ಅವರವರ ಶಾಲಾ ಕಾಲೇಜುಗಳಿಗೆ ಕರೆದುಕೊಂಡು ಹೋಗಿ ತರಗತಿಗಳಿಗೆ ಹಾಜರುಪಡಿಸಿ ಶಿಕ್ಷಕರಿಗೆ ಉಪನ್ಯಾಸಕ-ರಿಗೆ ಮತ್ತು ಪಾಲಕರಿಗೆ ಮಾಹಿತಿ ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಶಾಕ್ ನೀಡಿದ್ದಾರೆ.

ರಾಯಚೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ ಪುಟ್ಟ ಮಾದಯ್ಯ ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಕುಮಾರಸ್ವಾಮಿ ಹಾಗೂ ಜಿ ಹರೀಶ್ ಅವರ ಮಾರ್ಗದರ್ಶನದಲ್ಲಿ ಸಿಂಧನೂರಿನ ಪೊಲೀಸ್ ಉಪ ಅಧೀಕ್ಷಕ ಚಂದ್ರಶೇಖರ್ ಜಿ, ಶಹರ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ವೀರಾರೆಡ್ಡಿ, ಎಎಸ್‌ಐ ಮಲ್ಲಿಕಾರ್ಜುನ ಹಾಗೂ ಇತರೆ ಸಿಬ್ಬಂದಿ ಒಳಗೊಂಡು ರೋಡ್ ರೋಮಿಯೋ ಪಡೆ ರಚಿಸಲಾಗಿದೆ. ಇದು ತಿಂಗಳಿಂದ ಪ್ರತಿನಿತ್ಯ ಕಾರ್ಯ ನಿರ್ವಹಿಸುತ್ತಿದೆ ಎಂದು ಪಿ ಐ ವೀರರೆಡ್ಡಿ ತಿಳಿಸಿದರು.

## ರಾಜನಹಳ್ಳಿ ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವದ ಅಧ್ಯಕ್ಷರನ್ನಾಗಿ ಬಸನಗೌಡ ದದ್ದಲ್ ಆಯ್ಕೆ

❑ ನೈಜ್ಯ ದೆಸೆ ನ್ಯೂಸ್

**ಬೆಳಗಾವಿ: ಡಿ 11 ಆದಿಕವಿ ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರೆ* 2026 ಫೆ 08 ಮತ್ತು 09 ರಾಜನಹಳ್ಳಿ.. ಇಂದು ಬೆಳಗಾವಿಯಲ್ಲಿ* ನಡೆದ ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರಾ ಪೂರ್ವಭಾವಿ ಸಭೆಯಲ್ಲಿ ಪರಮಪೂಜ್ಯ ಡಾ.ಶ್ರೀ ಪ್ರಸನ್ನಾನಂದಪುರಿ ಮಹಾಸ್ವಾಮಿಜೀಗಳು,**

ಲೋಕೋಪಯೋಗಿ ಸಚಿವರಾದ ಸನ್ಮಾನ್ಯ ಶ್ರೀ ಸತೀಶ್ ಜಾರಕಿಹೊಳಿ ರವರ ನೇತೃತ್ವದಲ್ಲಿ ರಾಜನಹಳ್ಳಿ ಶ್ರೀ ಮಹರ್ಷಿ ವಾಲ್ಮೀಕಿ ಜಾತ್ರಾ ಮಹೋತ್ಸವದ ಅಧ್ಯಕ್ಷರನ್ನಾಗಿ*



ರಾಯಚೂರು ಗ್ರಾಮೀಣ ಕ್ಷೇತ್ರದ* ಜನಪ್ರಿಯ ಶಾಸಕರು ಕರ್ನಾಟಕ ಶ್ರೀ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಸನ್ಮಾನ್ಯ ಶ್ರೀ ಬಸನಗೌಡ ದದ್ದಲ್ ಅವರನ್ನು ನೇಮಿಸಿ ಗೌರವಪೂರಕವಾಗಿ ಸನ್ಮಾನಿಸಲಾಯಿತು..

ಈ ಸಂದರ್ಭದಲ್ಲಿ ಶಾಸಕರುಗಳಾದ ಸನ್ಮಾನ್ಯ ಶ್ರೀ ಟಿ ರಘುಮೂರ್ತಿ,ಶ್ರೀ ಹಂಪಯ್ಯ ಸಾಹುಕಾರ, ಶ್ರೀ ಬಿ ದೇವೆಂದ್ರಪ್ಪ, ಶ್ರೀ ವೇಣುಗೋಪಾಲ ನಾಯಕ, ಶ್ರೀ ಜೆ ಓ ಗಣೇಶ್, ಶ್ರೀ ಅನಿಲ್ ಚಿಕ್ಕಮಾದು, ಶ್ರೀ ಬಸನಗೌಡ ತುರುವಿಹಾಳ, ಶ್ರೀ ಡಾ ಖಖಿ ಶ್ರೀನಿವಾಸ, ರವರು ಮತ್ತು ಶ್ರೀ ಮುರಳಿ, ಶ್ರೀ ರಾಹುಲ್ ಜಾರಕಿಹೊಳ್ಳಿ ಹಾಗೂ ಸಮಾಜದ ಹಿರಿಯ ಮುಖಂಡರುಗಳು, ಹಲವು ಸಂಘಟನೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

## ಎಸ್.ಕೆ. ಶಿಕ್ಷಣ ಮಹಾವಿದ್ಯಾಲಯ ವಿದ್ಯಾರ್ಥಿಗಳ ಉತ್ತಮ ಸಾಧನೆ

❑ ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯವು 2024–25 ನೇ ಶೈಕ್ಷಣಿಕ ಸಾಲಿನ ಬಿ.ಈಡಿ 2ನೇ ಸೆಮಿಸ್ಟರ್ ಫಲಿತಾಂಶ ಪ್ರಕಟಿಸಿದ್ದು ಸ್ಥಳೀಯ ಶ್ರೀ ಖಾಸ್ಗತೇಶ್ವರ ಶಿಕ್ಷಣ ಮಹಾವಿದ್ಯಾಲಯಕ್ಕೆ 97.95 ರಷ್ಟು ಫಲಿತಾಂಶ ಬಂದಿದೆ.**

ಎರಡನೇ ಸೆಮಿಸ್ಟರ್ ದಲ್ಲಿ ವಿದ್ಯಾರ್ಥಿನಿ ಐಶ್ವರ್ಯ ದೊಡಮನಿ 84.50 (507/600) ಪ್ರಥಮ ಸ್ಥಾನ. ಅನ್ನಪೂರ್ಣ ಬಡಿಗೇರ 84.33 (506/600) ದ್ವಿತೀಯ ಸ್ಥಾನ. ಕೀರ್ತಿ ಹಂದ್ರಾಳ 83.83(503/600) ತೃತಿಯ







ಸ್ಥಾನ ಪಡೆದುಕೊಂಡಿದ್ದಾಳೆ. ಅಭಿನಂದನೆ: ತಮ್ಮ ಸಂಸ್ಥೆಯ ಈ ಮೂವರು ಪ್ರಶಿಕ್ಷಣಾರ್ಥಿಗಳು ಎರಡನೇ ಸೆಮಿಸ್ಟರ್ ದಲ್ಲಿ ಮಾಡಿದ ಉತ್ತಮ ಸಾಧನೆಗಾಗಿ ವಿ.ವಿ.ಸಂಘದ ಚೇರ್ಮನ್ನರು, ಕಾರ್ಯಕಾರಿಣಿ ಸದಸ್ಯರು , ಬಿಈಡಿ ಕಾಲೇಜ್ ಚೇರ್ಮನ್ನರು, ಪ್ರಾಚಾರ್ಯರು ಹಾಗೂ ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

# ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಅಂತರ ಮಹಾವಿದ್ಯಾಲಯಗಳ ಪಂದ್ಯಾವಳಿ ಯಶಸ್ವಿ

❑ ನೈಜ್ಯ ದೆಸೆ ನ್ಯೂಸ್

**ರಾಯಚೂರು: ಡಿಸೆಂಬರ್ 11 (ಕರ್ನಾಟಕ ವಾರ್ತೆ): ಇಲ್ಲಿನ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ವ್ಯಾಪ್ತಿಯ ಏಳು ಕೃಷಿ ಮಹಾವಿದ್ಯಾಲಯಗಳ ಅಂತರ ಮಹಾವಿದ್ಯಾಲಯ ಗುಂಪು ಪಂದ್ಯಾವಳಿಗಳು ರಾಯಚೂ-ರಿನ ಕೃ.ವಿ.ವಿಯ ಆವರಣದಲ್ಲಿ ಕೃಷಿ ತಾಂತ್ರಿಕ ಮಹಾವಿದ್ಯಾಲಯದ ವತಿಯಿಂದ ಡಿಸೆಂಬರ್ 6 ರಿಂದ 10ರವರೆಗೆ ಯಶಸ್ವಿಯಾಗಿ ನಡೆದವು.**

2025–26ನೇ ಸಾಲಿನ ಅಂತರ ಮಹಾವಿದ್ಯಾಲಯಗಳ ಪುರುಷರ ಹಾಗೂ ಮಹಿಳೆಯರ ಟೇಬಲ್ ಟೇನ್ನಿಸ್, ಕಬಡ್ಡಿ, ವಾಲಿಬಾಲ್ ಮತ್ತು ಖೋ–ಖೋ ಸ್ಪರ್ಧೆಗಳಲ್ಲಿ ಏಳು ಕೃಷಿ, ಸ್ನಾತಕೋತ್ತರ ಮಹಾವಿದ್ಯಾಲಯಗಳಿಂದ 320 ಪುರುಷ ಮತ್ತು 200 ಮಹಿಳಾ ಕ್ರೀಡಾ ಪಟುಗಳು ಭಾಗವಹಿಸಿದ್ದರು.





ಪುರುಷರ ಟೇಬಲ್ ಟೇನ್ನಿಸ್ ವಿಭಾಗದಲ್ಲಿ ರಾಯಚೂರಿನ ಕೃವಿವಿಯ ಸ್ನಾತಕೋತ್ತರ ವಿಭಾಗವು ಚಾಂಪಿಯನ್ ಹಾಗೂ ಭೀಮರಾಯನಗುಡಿ ಕೃಷಿ ಮಹಾವಿದ್ಯಾಲಯವು ರನ್ ಆಫ್ ಸ್ಥಾನ ಪಡೆದವು. ಮಹಿಳೆಯರ ಟೇಬಲ್ ಟೇನ್ನಿಸ್ ವಿಭಾಗದಲ್ಲಿ ರಾಯಚೂರಿನ ಕೃಷಿ ತಾಂತ್ರಿಕ ಮಹಾವಿದ್ಯಾಲಯವು ಚಾಂಪಿಯನ್ ಹಾಗೂ ಗಂಗಾವತಿ ಕೃಷಿ ಮಹಾವಿದ್ಯಾಲಯವು ರನ್ ಆಫ್ ಸ್ಥಾನ ಪಡೆದವು. ಪುರುಷರ ಕಬಡ್ಡಿ ವಿಭಾಗದಲ್ಲಿ ರಾಯಚೂರಿನ ಕೃಷಿ ಮಹಾವಿದ್ಯಾಲಯವು ಚಾಂಪಿಯನ್ ಹಾಗೂ ಗಂಗಾವತಿ ಕೃಷಿ ಮಹಾವಿದ್ಯಾಲಯವು ರನ್ ಆಫ್ ಸ್ಥಾನ ಪಡೆದವು. ಪುರುಷರ ವಾಲಿಬಾಲ್ ವಿಭಾಗದಲ್ಲಿ ರಾಯಚೂರಿನ ಸ್ನಾತಕೋತ್ತರ ವಿಭಾಗವು ಚಾಂಪಿಯನ್ ಹಾಗೂ ರಾಯಚೂರಿನ ತಾಂತ್ರಿಕ ಕೃಷಿ ಮಹಾವಿದ್ಯಾಲಯವು ರನ್ ಆಫ್ ಸ್ಥಾನ ಪಡೆದವು. ಮಹಿಳೆಯರ ವಾಲಿಬಾಲ್ ವಿಭಾಗದಲ್ಲಿ ಗಂಗಾವತಿಯ ಕೃಷಿ ಮಹಾವಿದ್ಯಾಲಯವು ಚಾಂಪಿಯನ್ ಹಾಗೂ ಕಲಬುರಗಿ ಕೃಷಿ ಮಹಾವಿದ್ಯಾಲಯವು ರನ್ ಆಫ್ ಸ್ಥಾನ ಪಡೆದವು. ಪುರುಷರ ಖೋ–ಖೋ ವಿಭಾಗದಲ್ಲಿ ರಾಯಚೂ-ರಿನ ತಾಂತ್ರಿಕ ಕೃಷಿ ಮಹಾವಿದ್ಯಾಲಯವು ಚಾಂಪಿಯನ್ ಹಾಗೂ ರಾಯಚೂರಿನ ಕೃಷಿ ಮಹಾವಿದ್ಯಾಲಯವು ರನ್ ಆಫ್ ಸ್ಥಾನ ಪಡೆದವು. ಮಹಿಳೆಯರ ಖೋ–ಖೋ ವಿಭಾಗದಲ್ಲಿ ಕಲಬುರಗಿಯ ಕೃಷಿ ಮಹಾವಿದ್ಯಾಲಯವು ಚಾಂಪಿಯನ್ ಹಾಗೂ ರಾಯಚೂರಿನ ಕೃಷಿ ಮಹಾವಿದ್ಯಾಲಯವು ರನ್ ಆಫ್ ಸ್ಥಾನ ಪಡೆದವು.

ಡಿ.10ರಂದು ಸಮಾರೋಪ ಸಮಾರಂಭ ನಡೆಯಿತು. ಕುಲಪತಿ ಡಾ.ಎಂ.ಹನುಮಂತಪ್ಪ ಅವರು ಮಾತನಾಡಿ, ಕ್ರೀಡಾ ಮನೋಭಾವ ಮತ್ತು ಶಿಸ್ತಿನ ಬಗ್ಗೆ ವಿದ್ಯಾರ್ಥಿಳಿಗೆ ಸಲಹೆ ಮಾಡಿದರು. ವಿದ್ಯಾರ್ಥಿಗಳು ಶೈಕ್ಷಣಿಕ ಮತ್ತು ಕ್ರೀಡಾ ಚಟುವಟಿ-ಕೆಗಳಲ್ಲಿ ಸಮಾನವಾಗಿ ತೊಡಗಿಸಿಕೊಳ್ಳಬೇಕೆಂದರು. ಸಮಾರೋಪ ಸಮಾರಂಭದಲ್ಲಿ ವಿಶ್ವವಿದ್ಯಾಲಯದ ಅಧಿಕಾರಿಗಳಾದ ಡಾ. ನಾರಾಯಣರಾವ್ ಕೆ., ಕೃಷಿ

## ಸಾಹಿತ್ಯ ಸಿಂಚನ

ನುಡಿಸೊಮ್ಮೆ ಎದೆಗೊಳಲು.!

ನಿನಗಿದೋ ಸಾವಿರ ಸಾವಿರದ ಶರಣು
ನುಡಿಸಿಬಿಡು ಒಮ್ಮೆ ಎದೆಯ ವೇಣು
ಝೇಂಕರಿಸಲಿ ಜೀವದ ಅಣು ಅಣು
ಚಿಮ್ಮಲಿ ಭಾವಚೈತನ್ಯದ ಪರಾಗರೇಣು.!

ಶ್ರೀಕರವ ಆಡಿಸುತ ಎದೆಗೊಳಲ ಮೇಲೆ
ಹೊಮ್ಮಿಸಿಬಿಡು ನಿನ್ನೊಲವ ನಾದದಲೆ
ಚಿಮ್ಮಿಸಿಬಿಡು ಅರಿವು ಆರಾಧನೆಯ ಸೆಲೆ
ಮೂಡಲಿ ಸಪ್ತವರ್ಣ ರಾಗ ರಂಗೋಲೆ.!

ಮಾರ್ದನಿಸಲಿ ಮಧುರ ಮುರಳಿಗಾನ
ಹರಿಸಿ ಧಮನಿ ಧಮನಿಗಳಲಿ ಸ್ವರಯಾನ
ಆವರಿಸಿ ಅನುರಣಿಸಲಿ ನಿನ್ನಯ ಧ್ಯಾನ
ಪುಳಕಿಸಲಿ ನಾದನಿನಾದಗಳ ಸುರಪಾನ.!

ಹಿಗ್ಗಿ ಕೊನರಲಿ ಕೊರಡಾದ ಉಸಿರುಸಿರು
ಮಧುಮುರಳಿಯಾಗಲಿ ಹೃದಯ ಬಿದಿರು
ನರನರಗಳಲಿ ಸಂಚರಿಸಲಿ ಇಂಚರ ತೇರು
ಕಾಯವಾಗಲಿ ಸಹಸ್ರ ಕೊಳಲಿನ ತವರು.!

ಒಡಲ ಕೊಳಲೊಳಗೆ ನಿನ್ನುಸಿರು ಬೆರೆತು
ಧನ್ಯವಾಗಲಿ ದೇವ ಎದೆಯ ಭಾವತಂತು
ಆತ್ಮ ಪರಮಾತ್ಮ ಸಂಗಮಿಸುತ ಕುಳಿತು
ಸುಶ್ರಾವ್ಯವಾಗಲಿ ಜನುಮವಿದು ಇನಿತು.!

ಹರಡಿ ನಿನ್ನಯ ವೇಣುವಿನ ದಿವ್ಯತರಂಗ
ನವ್ಯ ಸಂತಸದಿ ಸಂಭ್ರಮಿಸಲಿ ಅಂತರಂಗ
ಭವ್ಯ ಬೆಳದಿಂಗಳಾಗಲಿ ಬಾಳಿನ ನವರಂಗ
ಕಣ ಕಣವೂ ಮಾರ್ದನಿಸಲಿ "ರಂಗ ರಂಗ"

ಜೀವ ಭಾವ ಕಾದಿರಿಸಿ ಕಾದಿಹೆನು ಮಾಧವ
ಹೃದಯಮುರಳಿಯ ನುಡಿಸು ಬಾ ಯಾದವ
ಎದೆಗೊಳಲ ಊದು ಬಾರೋ ವಾಸುದೇವ
ಒಡಲವೇಣುಗೆ ನಿನ್ನುಸಿರು ಸೋಕಿಸು ದೇವ.!

ಎ.ಎನ್.ರಮೇಶ್. ಗುಬ್ಬಿ

## ನೂತನ ಪುರಸಭೆ ಮುಖ್ಯಾಧಿಕಾರಿ ನಟರಾಜ್ ಹೆಚ್. ಎನ್ ರವರಿಗೆ ಕರವೇ ಆಂಜನೇಯ ಭಂಡಾರಿ ಸನ್ಮಾನ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಡಿ.12. ಕರ್ನಾಟಕ ರಕ್ಷಣಾ ವೇದಿಕೆ ( ಪ್ರವೀಣ್ ಕುಮಾರ ಶೆಟ್ಟಿ ಬಣ ) ದ ಸಂಘಟನೆಯ ತಾಲೂಕ ಅಧ್ಯಕ್ಷ ಹೆಚ್ ಆಂಜನೇಯ ಭಂಡಾರಿ ನೂತನ ಪುರಸಭೆ ಮುಖ್ಯಾಧಿಕಾರಿಯಾಗಿ ಇಂದು ಅಧಿಕಾರ ವಹಿಸಿಕೊಂಡ ನಟ-ರಾಜ್ ಹೆಚ್. ಎನ್ ರವರಿಗೆ ಸನ್ಮಾನಿಸಿ ಗೌರವಿಸಿದ್ದಾರೆ.



ಈ ಸಂದರ್ಭದಲ್ಲಿ ಕರವೇ ಉಪಾಧ್ಯಕ್ಷರಾದ ಭೀಮೇಶ್ ಎಲ್. ನಾಯಕ, ಕುರುಮೇಶ್ ನಾಯಕ, ಅಶೋಕ್ ನಾಯಕ, ವೆಂಕಟೇಶ್ ಉಪ್ಪಾರ್, ಶಿವು ಪತ್ತಾರ್, ಸಲೀಂಖಾನ್ ಹಾಗೂ ಸಿದ್ದು ಚಲುವಾದಿ ಸೇರಿದಂತೆ ಹಲವರು ಇದ್ದರು.

ನೈಜ್ಯ ದೆಸೆ
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ತಾಲೂಕು ಪಂಚಾಯತಿ ಸಭಾಂಗಣದಲ್ಲಿ ಆನ್ ಲೈನ್ ನಲ್ಲಿ ಅಂತರಾಷ್ಟ್ರಮಟ್ಟದ ಸಮ್ಮೇಳನ.

ನೈಜ್ಯ ದೆಸೆ ನ್ಯೂಸ್

ನಗರದ ತಾಲೂಕು ಪಂಚಾಯಿತಿಯಲ್ಲಿ ಸಾಮೂಹಿಕ ಆಸ್ತಿಗಳ ಕುರಿತು ಅಂತರಾಷ್ಟ್ರ ಮಟ್ಟದ ಸಮ್ಮೇಳನ ಕಾರ್ಯಕ್ರಮ ಆನ್ ಲೈನ್ ನಲ್ಲಿ ಹಮ್ಮಿಕೊಳ್ಳಲಾಗಿದೆ ಅಧ್ಯಕ್ಷತೆ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ್ ಹಾಗೂ ಸಹಾಯಕ ನಿರ್ದೇಶಕ ಯಂಕಪ್ಪ ಭಾಗವಹಿಸಿ ತಾಲೂಕಿನ ಸ್ವಸಹಾಯ ಸಂಘಗಳ ಒಕ್ಕೂಟದ ಸದಸ್ಯರು ಮತ್ತು ಎಲ್ಲಾ ಗ್ರಾಮ ಪಂಚಾಯಿತಿ ಬೇರ್ಪೋಟೆಕ್ನಿಷಿಯನ್ ಮತ್ತು ಗ್ರಾಮ ಕಾಯ್ಕ ಮಿತ್ರಗಳು ಈ ಸಭೆಯಲ್ಲಿ ಭಾಗವಹಿಸಿದ್ದರು.

ಅಂತರಾಷ್ಟ್ರೀಯ ಈ ಸಮ್ಮೇಳನದಲ್ಲಿ ಭಾರತ ದೇಶದ ಎಲ್ಲಾ ರಾಜ್ಯಗಳು ಹಾಗೂ ವಿದೇಶದ ಸಂಪನ್ಮೂಲ ವ್ಯಕ್ತಿಗಳು ಕೂಡ ಭಾಗವಹಿಸಿದ್ದರು. ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಡಿಸೆಂಬರ್ 10 ರಿಂದ 12 ರವ-ರಿಗೆ ನಡೆಯುತ್ತದೆ. ಈ ಕಾರ್ಯಕ್ರಮವನ್ನು ಫೌಂಡೇಶನ್ ಫಾರ್ ಎಕಲಾಜಿಕಲ್ ಸೆಕ್ಯೂ-ರಿಟಿ ಸಂಸ್ಥೆಯು ಮುಂದಾಳತ್ವದಲ್ಲಿ ತಾಲೂಕಿನ ಐ.ಎಸಿ ಸಂಯೋಜಕರಾದ ಥಾಮಸ್ ಕಾರ್ಯಕ್ರಮದ ಉಸ್ತುವಾರಿ ಮತ್ತು ಜವಾಬ್ದಾರಿಯನ್ನು ವಹಿಸಿಕೊಂಡು ಕಾರ್ಯಕ್ರಮ ಯಶಸ್ವಿಯಾಗಲು ಸಹಕರಿಸಿದರು.



ಕರ್ನಾಟಕ ರಾಜ್ಯದ ಸರ್ಕಾರಿ ಸಾಮೂಹಿಕ ಆಸ್ತಿಗಳನ್ನ ಉಳಿಸುವಲ್ಲಿ ಮಹಿಳೆಯರು ಮತ್ತು ಗ್ರಾಮ ಪಂಚಾಯಿತಿ ಸದಸ್ಯ ಅಧ್ಯಕ್ಷರ ಪಾತ್ರದ ಕುರಿತು ಅಂತರಾಷ್ಟ್ರ ಮಟ್ಟದಲ್ಲಿ ಭಾರತ ದೇಶದ ಎಲ್ಲಾ ರಾಜ್ಯದ ಗ್ರಾಮ ಪರಿಸರ ಅಭಿವೃದ್ಧಿ ಸಮಿತಿ ಪದಾಧಿಕಾರಿಗಳು ಭಾಗವಹಿಸಿ, ತಮ್ಮ ಅನಿಸಿಕೆ ಮತ್ತು ವಿಚಾರಗಳನ್ನು ಚರ್ಚಿಸಲಾಯಿತು. ಜೊತೆಗೆ ಆಯಾ ತಾಲೂಕಿನ ಗ್ರಾಮಗಳಲ್ಲಿ ಪರಿಸರ ಅಭಿವೃದ್ಧಿ ಮತ್ತು ಪರಿಸರವನ್ನು ಉಳಿಸುವಲ್ಲಿ ಅವರವರ ಕೊಡುಗೆ ಮತ್ತು ಪಾತ್ರಗಳು ಮತ್ತು ಆದಾಯ ಉತ್ಪನ್ನ ಚಟುವಟಿಕೆಗಳಿಗೆ ಪರಿಸರದ ಕೊಡುಗೆ ಕುರಿತು ಸವಿವರವಾಗಿ ಚರ್ಚಿಸಲಾಯಿತು.

## ಕೃಷಿ ಕಚೇರಿ ಸ್ಥಳಾಂತರ ಆದೇಶ ರದ್ದಿಗೆ ಪಟ್ಟು :ಶಾಸಕ ವಜ್ಜಲ್

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಡಿ 12. ಪಟ್ಟಣದಲ್ಲಿ ಕಳೆದ 10 ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಕೃಷಿ ಉಪ ನಿರ್ದೇಶಕ ಕಛೇರಿ-2 ಸಿಂಧನೂರಿಗೆ ಸ್ಥಳಾಂತರಿಸುವ ಆದೇಶವನ್ನು ಕೂಡಲೆ ರದ್ದುಪಡಿಸಬೇಕೆಂದು ಲಿಂಗಸಗೂರು ಕ್ಷೇತ್ರದ ಶಾಸಕ ಮಾನಪ್ಪ ವಜ್ಜಲ್ ಬೆಳಗಾವಿಯ ವಿಧಾನಸಭಾ ಅಧಿವೇಶನದ ಪ್ರಶೋತ್ತರ ಕಲಾಪದಲ್ಲಿ ಕೃಷಿ ಸಚಿವ ಚಲುವರಾಯಸ್ವಾಮಿ ಅವರಿಗೆ ಒತ್ತಾಯಿಸಿದರು.

ಶಾಸಕ ಮಾನಪ್ಪ ವಜ್ಜಲ್ ಕೃಷಿ ಇಲಾಖೆ ಸಚಿವರೊಡನೆ ಚರ್ಚಿಸುವಾಗ ಯಾವುದೇ ಕಾರಣಕ್ಕೂ ಉಪ ನಿರ್ದೇಶಕರ ಕಚೇರಿ ಸ್ಥಳಾಂತರಕ್ಕೆ ಬಿಡುವುದಿಲ್ಲ. ಈ ಕಛೇರಿ ಲಿಂಗಸಗೂರಿನಲ್ಲಿಯೇ ಸರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ರೈತರಿಗೆ ಅನುಕೂಲವಾಗಿದೆ. ಹೀಗಾಗಿ ಕೃಷಿ ಇಲಾಖೆ ಅಧಿಕಾರಿಗಳು ರಾಜ-ಕೀಯ ಒತ್ತಡಕ್ಕೆ ಮಣಿದು ಸರಕಾರಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ ಎಂದು ಹೇಳಿದರು. ರಾಜ್ಯ ರೈತ ಸಂಘ ಹಸಿರು ಸೇನೆ ಹಾಗೂ ಇತರೆ ಸಂಘ ಸಂಸ್ಥೆಗಳ ಕಾರ್ಯಕರ್ತರು ಧರಣಿ ಉಪವಾಸ ಸತ್ಯಗ್ರಹ ನಡೆಸಿದ್ದು, ಸ್ಥಳಾಂತರ ಆದೇಶ ರದ್ದುಪಡಿಸದಿದ್ದರೆ ನಾವು ಪ್ರತಿಭಟನೆಯಲ್ಲಿ ಭಾಗವಹಿಸಬೇಕಾಗುತ್ತದೆ ಕಾನೂನು ಸುವ್ಯವಸ್ಥೆ ಕೈ ಮೀರಿ ಹೋದಾಗ ಇದಕ್ಕೆ ಸರಕಾರವೇ ಜವಾಬ್ದಾರಿ ಆಗುತ್ತದೆ ಎಂದು ಹೇಳಿದರು.



ಸರಕಾರ ಲಿಂಗಸಗೂರು ಮತ ಕ್ಷೇತ್ರವನ್ನು ಏಕೆ ಟಾರ್ಗೆಟ್ ಮಾಡುತ್ತಿದ್ದೆ, ಈ ಮೊದಲು ಲಿಂಗಸಗೂರಿಗೆ ಮಂಜೂರಾದ 200 ಹಾಸಿಗೆ ಜಿಲ್ಲಾಸ್ಪತ್ರೆ ಸ್ಥಳಾಂತರಿಸಲಾಯಿತು. ಈಗ ಕೃಷಿ ಕಛೇರಿ ಸ್ಥಳಾಂತರ ನಡೆಸುವ ಹುನ್ನಾರ ನಡೆದಿದ್ದು ಹಾಗೂ ಇತರೆ ಕಛೇರಿ ಸ್ಥಳಾಂತರಕ್ಕೆ ಪ್ರಯತ್ನ ನಡೆಸಿದ್ದು, ನಾವು ಯಾವುದೆ ಕಾರಣ-ಕ್ಕೂ ಸ್ಥಳಾಂತರಕ್ಕೆ ಒಪ್ಪುವುದಿಲ್ಲ. ಸ್ಥಳಾಂತರಕ್ಕೆ ಸರಕಾರ ತಡೆ ನೀಡಿದರು ಮೂಲ ಆದ-ೇಶ ರದ್ದಾಗಬೇಕು ಎಂದು ಒತ್ತಾಯಿಸಿದರು.

ಕೃಷಿ ಸಚಿವ ಎನ್ ಚಲವರಾಯ ಸ್ವಾಮಿ ಉತ್ತರಿಸಿ ಕೃಷಿ ಇಲಾಖೆ ಅಧಿಕಾರಿಗಳ ವರದಿ ಅನ್ವಯ ಕೃಷಿ ಉಪ ನಿರ್ದೇಶಕರ ಕಛೇರಿಯನ್ನು ಸ್ಥಳಾಂತರಕ್ಕೆ ಒಪ್ಪಲಾಗಿ-ತ್ತು. ಆದರೆ, ಈಗ ಈ ಕಛೇರಿಯನ್ನು ಸ್ಥಳಾಂತರ ಮಾಡದಂತೆ ತಡೆಹಿಡಿಯಲಾಗಿದೆ. ಮುಂದಿನ ಕ್ರಮಕ್ಕಾಗಿ ಅಧಿಕಾರಿಗಳಿಂದ ಸಮಗ್ರ ವರದಿ ತರೆಸಿಕೊಂಡು ಆದೇಶ ರದ್ದಿನ ಬಗ್ಗೆ ವಿಚಾರ ಮಾಡಲಾಗುದೆಂದರು, ಈ ಕು-ರಿತು ಕೃಷಿ ಕಛೇರಿ ಸ್ಥಳಾಂತರ ವಿರೋಧಿಸಿ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ ಹಾಗೂ ಇತರರು ಮನವಿ ಸಲ್ಲಿಸಿದ್ದಾರೆ ಎಂದು ಸಚಿವರು ತಿಳಿಸಿದ್ದಾರೆ.

## ಪೋಲಿಯೋ ಮೇಲಿನ ನಮ್ಮ ಗೆಲುವು ಮುಂದುವರೆಸಲು ಎರಡು ಹನಿ ಪೋಲಿಯೋ ಲಸಿಕೆ ಹಾಕಿಸಿ: ಡಾ ನಸೀರ್

ನೈಜ್ಯ ದೆಸೆ ನ್ಯೂಸ್

ಮಾನ್ವಿ: ಡಿ.11-ನಮ್ಮ ಭಾರತ ದೇಶದಲ್ಲಿ ಕೊನೆಯ ಪೋಲಿಯೋ ಪ್ರಕರಣ 2011 ಜನೇವರಿಯಲ್ಲಿ ಪಶ್ಚಿಮ ಬಂಗಾಳ ರಾಜ್ಯದಲ್ಲಿ ವರದಿಯಾದ ನಂತರ ಕಳೆದ 14 ವರ್ಷಗಳಿಂದ ನಾವು ಯಾವುದೇ ಪ್ರಕರಣ ವರದಿಯಾಗಿಲ್ಲ, ಆದರೂ ಸಹ ನೇರೆಯ ರಾಷ್ಟ್ರಗಳಲ್ಲಿ ಪ್ರಕರಣಗಳು ಇರುವುದರಿಂದ ಡಿಸೆಂಬರ್ 21 ನೇ ತಾ-ರೀಖು ಹುಟ್ಟಿನಿಂದ ಐದು ವರ್ಷದೊಳಗಿನ ಮಕ್ಕಳಿಗೆ ತಪ್ಪದೆ ಉಚಿತವಾಗಿ ಪೋಲಿಯೋ ಲಸಿಕೆ ಹಾಕಿಸಲು ಕಲ್ಲೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಆಯುಷ್ಯ ವೈದ್ಯರಾದ ಡಾ ಮಹಮ್ಮದ್ ನಸೀರ್ ತಾಯಂದಿರಿಗೆ ಮನವಿ ಮಾಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ಕಲ್ಲೂರು ಗ್ರಾಮದ ಲಕ್ಷ್ಮಿ ದೇವಸ್ಥಾನ ಬಳಿ ಸಾರ್ವತ್ರಿಕ ಲಸಿಕಾ ಅಧಿವೇಶನದಲ್ಲಿ ಹಾಜರಿದ್ದ ತಾಯಂದಿರಿಗೆ ಮಾಹಿತಿ ನೀಡಿ ಮಾತನಾಡುತ್ತಾ ಪೋಲಿಯೋ ಲಸಿಕೆ ಮಾತ್ರವಲ್ಲದೆ ಬಾಲ್ಯದಲ್ಲಿ ಮಕ್ಕಳಿಗೆ ಮಾರಕವಾಗಬಹುದಾದ 12 ಮಾರಕ ರೋಗಗಳ ವಿರುದ್ಧ ವಯಸ್ಸಿಗನುಸಾರವಾಗಿ ಉಚಿತವಾಗಿ ಲಸಿಕೆಗಳನ್ನು ಹಾಕಲಾಗುತ್ತಿದ್ದು ಮನೆಯ ವೈಯಕ್ತಿಕ ಕೆಲಸಗಳನ್ನು ಬದಿಗಿಟ್ಟು ತಪ್ಪದೆ ಎಲ್ಲ ಲಸಿಕೆಗಳನ್ನು ಹಾಕಿಸಲು ವಿನಂತಿಸಿದರು.



ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ ಮಾಹಿತಿ ನೀಡಿ ಹೆರಿಗೆ ನಂತರದಲ್ಲಿ ಎರಡನೆಯ ಮಗುವಿಗೆ ಕನಿಷ್ಠ ಮೂರು ವರ್ಷಗಳ ಜನನದ ಅಂತರ ತಾಯಿ ಮಗುವಿನ ಆರೋಗ್ಯ ದೃಷ್ಟಿಯಿಂದ ಮಹತ್ವಪೂರ್ಣವಾಗಿದ್ದು, ದಂಪತಿಗಳು ನಿರ್ಧರಿಸಿ ಪತ್ನಿಗೆ ಸರಳ, ಸುಲಭವಾದ "ಅಂತರ" ಚುಚ್ಚುಮದ್ದನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಪಡೆಯುವ ಮೂಲಕ ಹೊಲ-ಮನೆಯ ಕೆಲಸ, ಧಾರ್ಮಿಕ ಕಾರ್ಯಗಳಲ್ಲಿ ಭಾಗವಹಿಸಲು ಯಾವುದೇ ಅಂಜು ಅಳುಕಿಲ್ಲದೆ ನಿರ್ವಹಿಸಬಹುದಾಗಿದ್ದು ಎಲ್ಲ ಸರಕಾರಿ ಆಸ್ಪತ್ರೆಗಳಲ್ಲಿ ಲಭ್ಯವಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರಾಥಮಿಕ ಆರೋಗ್ಯ ಸಂರಕ್ಷಣಾಧಿಕಾರಿ ಲಕ್ಷ್ಮಿ, ರೂಪಾ, ಹೆಚ್ಐಓ ಮಹಮ್ಮದ್, ಸಿಹೆಚ್ಓ ನಾಗರಾಜ, ಮೌನಿಕಾ, ಆಶಾ ಕಾರ್ಯಕರ್ತೆ ದುರ್ಗಮ್ಮ, ನಾಗಮ್ಮ, ಸೇರಿದಂತೆ ವಿರೇಶ್ ಹಾಗೂ ತಾಯಂದಿರು ಮತ್ತು ಇತರರು ಹಾಜರಿದ್ದರು.

## ಬೆಳಗಾವಿ ಅಧಿವೇಶನದಲ್ಲಿ ಏಮ್ಸ್ ಚರ್ಚೆ: ಕೇಂದ್ರದ ವಿರುದ್ಧ ಸಚಿವ ಬೋಸರಾಜು ಆಕ್ರೋಶ

ನೈಜ್ಯ ದೆಸೆ ನ್ಯೂಸ್

ಬೆಳಗಾವಿ: ಡಿಸೆಂಬರ್ 11 ರಂದು ಮಂಡಲ ವಿಧಾನಪರಿಷತ್ತಿನ ಅಧಿವೇಶನದ, ಕಲಾಪದಲ್ಲಿ ರಾಯಚೂರಿಗೆ ಏಮ್ಸ್ ಮಂಜೂರು ಮಾಡುವ ವಿಚಾರ ಸದನದಲ್ಲಿ ಪ್ರತಿಧ್ವನಿಸಿತು.

ಸಣ್ಣನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಪರಿಷತ್ತಿನ ಸಭಾ ನಾಯಕರು ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್ ಎಸ್ ಬೋಸರಾಜು ಅವರು ಅದಕ್ಕೆ ತಕ್ಕ ಉತ್ತರವನ್ನೂ ಕೇಂದ್ರದ ಮಂತ್ರಿಗಳು ಮುಂದಿನ ವರ್ಷ ರಾಯಚೂ-ರಿಗೆ ಏಮ್ಸ್ ಮಂಜೂರು ಮಾಡುತ್ತೇವೆ ಎಂದು ರಾಯಚೂರು ಭೇಟಿ ಸಂದರ್ಭದಲ್ಲಿ ಭರವಸೆ ನೀಡಿದರು. ವರ್ಷದಲ್ಲಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂತು. ಅದಕ್ಕೆ ಕೊಟ್ಟ ಮಾತು ಬಿಜೆಪಿ ಪಕ್ಷ ಮರೆತು ಹೋಗಿದೆಯೇ.



ಆದರೆ, ಕಾಂಗ್ರೆಸ್ ಸರ್ಕಾರ ಏಮ್ಸ್ ಪ್ರಸ್ತಾಪ ಬಿಟ್ಟಿಲ್ಲ. ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು 5 ಸಲ ಕೇಂದ್ರ ಮತ್ತು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದು ರಾಯಚೂ-ರಿಗೆ ಏಮ್ಸ್ ನೀಡುವಂತೆ ಮನವಿ ಮಾಡಿದ್ದಾರೆ. ನಾನು ಮತ್ತು ವೈದ್ಯಕೀಯ ಶಿಕ್ಷಣ ಸಚಿವರಾದ ಶರಣಪ್ರಕಾಶ ಪಾಟೀಲರು 3 ಬಾರಿ, ಶಾಸಕರು, ನಿಯೋಗದೊಂದಿಗೆ ದೆಹಲಿಗೆ ಹೋಗಿ ಸಂಬಂಧ ಪಟ್ಟ ಮಂತ್ರಿಗಳಿಗೆ ಸಚಿವಾಲಯಕ್ಕೆ ರಾಯಚೂರಿಗೆ ಏಮ್ಸ್ ಮಂಜೂರು ಮಾಡಿ ಅಂತ ಪದೇ ಪದೇ ಮನವಿ ಮಾಡಕಾಗಿದೆ.

ಇಷ್ಟಾದರೂ ಕೇಂದ್ರ ಬಿಜೆಪಿ ಸರ್ಕಾರ ಈ ತನಕ ರಾಯಚೂರಿಗೆ ಏಮ್ಸ್ ಮಂಜೂರು ಮಾಡುವಲ್ಲಿ ಮೀನಾ, ಮೇಷ ಎಣಿಸುತ್ತಿದೆ. ಇದರ ಹಿಂದಿನ ಉದ್ದೇಶ ಏನು ಅನ್ನೋದು ಅರ್ಥ ಮಾಡಿಕೊಳ್ಳಬೇಕು. ಬಿಜೆಪಿಗೆ ಕಲ್ಯಾಣ ಕರ್ನಾಟಕ ಭಾಗದ ಜನರ ಹಿತ ಮುಖ್ಯವಲ್ಲ. ರಾಜಕೀಯವಷ್ಟೇ ಮುಖ್ಯ ಎಂದು ತಿರುಗೇಟು ನೀಡಿದರು.

## ತಾಯಿ, ಮಕ್ಕಳ ಆಸ್ಪತ್ರೆಗೆ ಜಿಪಂ ಸಿಇಓ ಈಶ್ವರ ಕಾಂದೂ ದಿಢೀರ್ ಭೇಟಿ; ಪರಿಶೀಲನೆ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಡಿಸೆಂಬರ್ 11 (ಕರ್ನಾಟಕ ವಾರ್ತೆ): ನಗರದಲ್ಲಿರುವ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ ಅವರು ಡಿ.11 ರಂದು ದಿಢೀರ್ ಭೇಟಿ ನೀಡಿ ಆಸ್ಪತ್ರೆಯಲ್ಲಿನ ಮೂಲಭೂತ ಸೌಕರ್ಯಗಳ ಬಗ್ಗೆ ಪರಿಶೀಲಿಸಿದರು.

ಆಸ್ಪತ್ರೆಯ ನಾನಾ ವಾರ್ಡ್ಗಳಿಗೆ ಸಂಚರಿಸಿ ಭಾಣಂತಿಯರ ಮತ್ತು ಶಿಶುಗಳ ಯೋಗಕ್ಷೇಮ ವಿಚಾರಿಸಿದರು. ಸರಿಯಾದ ರೀತಿಯಲ್ಲಿ ಊಟ ಕೊಡುತ್ತಾರಾ? ಚಿಕಿತ್ಸೆ ಮತ್ತು ಔಷಧಿ ಸರಿಯಾಗಿ ನೀಡುತ್ತಾರಾ? ಎಂದು ಕೇಳಿ ಮಾಹಿತಿ ಪಡೆದುಕೊಂಡರು. ಆಸ್ಪತ್ರೆಯಲ್ಲಿ ನಮಗೆ ಸರಿಯಾದ ಚಿಕಿತ್ಸೆ ದೊರೆಯುತ್ತಿದೆ ಎಂದು ಭಾಣಂತಿಯರು ಪ್ರತಿಕ್ರಿಯಿಸಿದರು.



ರಾತ್ರಿ ವೇಳೆಯಲ್ಲೂ ಚಿಕಿತ್ಸೆ ನೀಡಿ: ಜಿಲ್ಲೆಯ ಯಾವುದೇ ಗ್ರಾಮದಿಂದ ರಾತ್ರಿ ವೇಳೆಯಲ್ಲಿ ತುರ್ತು ಚಿಕಿತ್ಸೆ ಕೋರಿ ಬರುವ ಬಾಣಂತಿಯ-ರಿಗೆ ವೈದ್ಯರು ಮತ್ತು ಆಸ್ಪತ್ರೆಯಲ್ಲಿನ ಸಿಬ್ಬಂದಿ ತಕ್ಷಣವೇ ಸ್ಪಂದನೆ ನೀಡಬೇಕು. ಯಾವುದೇ ನೆಪ ಹೇಳದೇ ಬೇರೆಡೆ ಕಳುಹಿಸಬಾರದು. ಪ್ರಥಮ ಹಂತದ ಚಿಕಿತ್ಸೆಗೆ ಕ್ರಮವಹಿಸಿ, ಹೆಚ್ಚಿನ ಚಿಕಿತ್ಸೆಯ ಅವಶ್ಯವಿದ್ದರೆ ಮಾತ್ರ ಬೇರೆಡೆ ಕಳುಹಿಸಲು ಕ್ರಮವಹಿಸಬೇಕು ಎಂದು ಸಿಇಓ ಅವರು ಇದೆ ವೇಳೆ ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಅಕ್ಕ ಕೆಫೆ ಕಾಮಗಾರಿ ಪರಿಶೀಲನೆ: ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಆವರಣದಲ್ಲಿ ನಿರ್ಮಾಣವಾಗುತ್ತಿರುವ ಅಕ್ಕ ಕೆಫೆ ಕಾಮಗಾರಿಯನ್ನು ಸಿಇಓ ಅವರು ವೀಕ್ಷಣೆ ಮಾಡಿ, ಗುಣಮಟ್ಟದ ಕಾಮಗಾರಿ ನಡೆಸಲು ಸೂಚನೆ ನೀಡಿದರು. ನೂತನ ಪೌಷ್ಟಿಕ ಪುನಶ್ಚೇತನ ಕೇಂದ್ರ ಸ್ಥಾಪನೆಗೆ ಸಿದ್ದತೆ ಮಾಡಿಕೊಳ್ಳಲು ಇದೆ ವೇಳೆ ಸಿಇಓ ಅವರು ತಿಳಿಸಿದರು. ಮಕ್ಕಳ ಆರೈಕೆಗೆ ಹಾಗೂ ಎಸ್-ಎನ್‌ಸಿಯು ಘಟಕ್ಕೆ ಬೇಕಾಗುವ ಪರಿಕರಗಳ ಖರೀದಿಗೆ ಬೇಡಿಕೆ ಪತ್ರವನ್ನು ಕೂಡಲೇ ಸಲ್ಲಿಸುವಂತೆ ಸೂಚಿಸಿ, ತಾಯಿ ಮಕ್ಕಳ ಆರೈಕೆಯ ಸೇವೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.





ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಬಸವರಾಜ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿ ಡಾ.ಸುರೇಂದ್ರ ಬಾಬು, ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ ಡಾ.ನಂದಿತಾ, ಹಾಗೂ ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಪ್ರಜ್ವಲ್ ಸೇರಿದಂತೆ ಇನ್ನಿತರ ವೈದ್ಯರು ಮತ್ತು ಸಿಬ್ಬಂದಿ ಇದ್ದರು.

